# ಉಪತಹಶೀಲ್ದಾರರು, ಹಿರೇಹಡಗಲಿ ಇವರ ನ್ಯಾಯಾಲಯದಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| ಜುಂಜಪ್ಪ ರಾಜವಾಳದ ತಂದೆ ಲೇಟ್ ತಿಪ್ಪಣ್ಣ ರಾಜವಾಳದ , ದಾಸನಹಳ್ಳಿ ಗ್ರಾಮ, ಹಡಗಲಿ ತಾ. | ಪಾರ್ವತಮ್ಮ ಗಂಡ ಬಿ.ನಾಗಪ್ಪ , ದಾಸನಹಳ್ಳಿ ಗ್ರಾಮ, ಹಡಗಲಿ ತಾ. |

ವಿವಾದಿತ ಜಮೀನಿನ ವಿವರ:

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ದಾಸನಹಳ್ಳಿ | 226/ಬಿ | 5-69 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಬೂದನೂರು ಗ್ರಾಮದ ಮೇಲ್ಕಂಡ ಜಮೀನಿಗೆ ಸಂಬಂಧಿಸಿದಂತೆ, ದಾಸನಹಳ್ಳಿ ಗ್ರಾಮದ ನಿವಾಸಿಯಾದ ಜುಂಜಪ್ಪ ರಾಜವಾಳದ ತಂದೆ ಲೇಟ್ ತಿಪ್ಪಣ್ಣ ರಾಜವಾಳದ ಇವರು ಪೋತಿ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ದಿನಾಂಕ 4-7-2011 ರಂದು ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸು ದಿ:6-7-2011 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:2-8-2011 ರಂದು ದಾಸನಹಳ್ಳಿ ಗ್ರಾಮದ ನಿವಾಸಿಯಾದ ಪಾರ್ವತಮ್ಮ ಗಂಡ ಬಿ.ನಾಗಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ಸಂಖ್ಯೆ 3/2011-12 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವಿಚಾರಣೆಗೆ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:12-9-2011 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರರು ಸದರಿ ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ತಕರಾರುದಾರರು ತಮ್ಮ ತಕರಾರಿನಲ್ಲಿ ತಿಳಿಸಿದಂತೆ ಹಾಲಿ ಪಟ್ಟದಾರಳಾದ ಗಂಗವ್ವ ರಾಜವಾಳ ಗಂಡ ತಿಪ್ಪಣ್ಣ ಇವರಿಗೆ ತಾನು ಮತ್ತು ಅರ್ಜಿದಾರ ಇಬ್ಬರು ಮಕ್ಕಳು. ಇಬ್ಬರು ಅಕ್ಕ ಮತ್ತು ತಮ್ಮಂದಿರು. ನನ್ನ ತಮ್ಮನಾದ ಅರ್ಜಿದಾರ ಆಸ್ತಿ ಕಬಳಿಸುವ ದುರುದ್ದೇಶದಿಂದ ಹಕ್ಕು ಬದಲಾವಣೆಗೆ ಅರ್ಜಿ ಹಾಕಿರುತ್ತಾನೆ. ಸದರಿ ಜಮೀನು ತನ್ನ ತಾಯಿಯ ಹೆಣ್ಣು ಆಸ್ತಿಯಾಗಿರುತ್ತದೆ. ಕಾರಣ ಹಕ್ಕು ಬದಲಾವಣೆ ಮಡಬಾರದೆಂದು ತಕರಾರಿನಲ್ಲಿ ತಿಳಿಸಿರುತ್ತಾರೆ. ಅರ್ಜಿದಾರನು ದಿ:30-3-1996 ರಂದು ತಕರಾರುದರರಿಂದ ಬರೆಸಿಕೊಂಡ ನೋಂದಾಯಿತವಲ್ಲದ ಹಿಸ್ಸೆ ಹಕ್ಕು ಬಿಡುಗಡೆ ಪತ್ರದ ಪ್ರತಿಯನ್ನು ಸಲ್ಲಿಸಿರುತ್ತಾರೆ. ಆದರೆ ಸದರಿ ಬಿಡುಗಡೆ ಪತ್ರದ ಪ್ರಕಾರ ಯಾವುದೇ ಮ್ಯುಟೇಷನ್ ಬದಲವಣೆ ಆಗಿರುವುದಿಲ್ಲ. ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ದಾಖಲೆ ಮತ್ತು ಹೇಳಿಕೆಗಳನ್ನು ಪರಿಶೀಲಿಸಲಾಯಿತು. ವಂಶವೃಕ್ಷದ ಪ್ರಕಾರ ತಕರಾರುದಾರರು ಸಹ ಹಕ್ಕುದಾರರಿರುವುದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/31/2010-11 ದಿನಾಂಕ:17-10-2016 .

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ಸಂಖ್ಯೆ 3/2011-12 ರ ಪ್ರಕರಣದಲ್ಲಿ ತಕರಾರುದಾರರ ಅರ್ಜಿಯನ್ನು ಪುರಸ್ಕರಿಸುತ್ತಾ, ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಆದೇಶಿಸಿದೆ. ಅರ್ಜಿದಾರರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಸ್ಥಿರಪಡಿಸಿಕೊಂಡು ಪರಿಹರ ಕಂಡುಕೊಳ್ಳಲು ಆದೇಶೀಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.